ಅಧ್ಯಕ್ಷರು : ನಿಮ್ಮ ರುಜು ಇಲ್ಲ, ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ ಬಿಡಿ. ಯಾವುದೇ ಅನ್ಯಾಯ ಮಾಡುವುದಿಲ್ಲ, ಎಲ್ಲಾ ಸರಿಪಡಿಸಿಕೊಡುತ್ತೇವೆಂದು ಅವರು clear ಆಗಿ ಹೇಳಿದ್ದಾರೆ. ಆಯಿತು. ಪ್ಲೀಸ್.

ಶ್ರೀ ಬಿ.ಸುರೇಶ್‌ಗೌಡ : ಅಧ್ಯಕ್ಷರೆ, ಈಗ ಮಕ್ಕಳನ್ನೆಲ್ಲಾ ಬೀದಿಗೆ ಹಾಕಿ ಹೊರಗಡೆ ಹೋಗಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಆ ರೀತಿ ಅವರು ಹೇಳಿದ್ದಾರೆಯೇ?

ಶ್ರೀ ಬಿ.ಸುರೇಶ್‌ಗೌಡ : ಈಗ admissions ಆಗಿ ಹೋಗಿದೆ, ಈಗ ಅದನ್ನು ರದ್ದು ಮಾಡಿ ಎಂದರೆ ಹೇಗೆ?

ಅಧ್ಯಕ್ಷರು : ಅವರು ಅಷ್ಟು ಚೆನ್ನಾಗಿ ಹೇಳಿದ್ದಾರೆ, ನೀವು ನೋಟಿಸ್ ಕೊಟ್ಟಿರುವಿರಾ? ಇಲ್ಲ ಸುಮ್ಮನಿರಿ, ಸಾಕು ಬಿಡಿ.

4. ವಿಷಯ : ರಾಜ್ಯದಲ್ಲಿ ಅಕ್ರಮ ಮರುಳು ಗಣಿಗಾರಿಕೆ ನಡೆಯುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ನಮ್ಮ ಕ್ಷೇತ್ರ ತುರುವೇಕೆರೆಯ ಶಿಂಷಾ ನದಿಯಲ್ಲಿ ಮರಳು ದಂಧೆ ನಡೆಯುತ್ತಿದೆ, ಅಲ್ಲಿ ಬಹುಶಃ ಯಾರೋ ಒಬ್ಬ ಆಶ್ರಯ ಮನೆ ಕಟ್ಟಿಕೊಳ್ಳುವವನು ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳುವವನು ಟ್ರಾಕ್ಟರ್‌ನಲ್ಲಿ ತುಂಬಿಕೊಳ್ಳಲಿ, ನಮ್ಮದೇನೂ ವಿರೋಧವಿಲ್ಲ, ಏನಾಗಿದೆ ಅಂದರೆ ಕೆಲವಷ್ಟೇ ಜನ ದಂಧೆ ಮಾಡುತ್ತಿದ್ದಾರೆ. ಇಟಾಚಿ, ಲಾರಿ, ಟ್ರಾಕ್ಟರ್‌ಗಳಲ್ಲಿ ತುಂಬಿ stock ಮಾಡಿ ಅದನ್ನು ಬೆಂಗಳೂರಿಗೆ ದಿವಸ ಕೊನೆ ಪಕ್ಷ 30–40 ಲಾರಿಗಳಲ್ಲಿ ಮರಳು ಲೋಡ್ ಹೋಗುತ್ತಿವೆ. ಮಹದೇಪ್ಪನವರೆ, ಹಿಂದೆ ಆ ನದಿ ಪಾತ್ರದಲ್ಲಿ ಮರಳು ಬೊರ್ ಎಂದು ಹಾಕುತ್ತಿದ್ದರು. 40–50 ಅಡಿಗೆ ಸಾಕಷ್ಟು ನೀರು ಬರುತ್ತಿತ್ತು. ಅಲ್ಲಿ ತೆಂಗು, ಅಡಿಕೆಯನ್ನೆಲ್ಲಾ ಸುಮಾರು ಹತ್ತು, ಇಪ್ಪತ್ತು, ಮೂವತ್ತು ವರ್ಷಗಳಿಂದ ಬೆಳೆದಿವೆ. ಈಗೇನಾಗಿದೆ,ಭೀಕರ ಬರಗಾಲ ಇದೆ, ನೀರಿಲ್ಲ. ಹಾಗಾಗಿ ಮರುಳು ಸಂಪೂರ್ಣವಾಗಿ ಲಿಫ್ಟ್ ಮಾಡಿಬಿಟ್ಟು ಎಲ್ಲಾ ಬೋರ್‌ವೆಲ್ dryಆಗಿವೆ. ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರಿಲ್ಲ. 700–800 ಅಡಿ ಬೋರ್‌ವೆಲ್ ಕೊರೆದರೂ ನೀರು ಬರುವುದಿಲ್ಲ. ಅಂಥ ತೀವ್ರವಾದ ಸಮಸ್ಯೆಯಾಗಿದೆ. ಅಲ್ಲಿ ಕೆಲವಷ್ಟೆ ಜನ ದಂಧೆ ಮಾಡುತ್ತಾರೆ.

ಅಧ್ಯಕ್ಷರು : ಈಗ ಏನು ಮಾಡಬೇಕು ಹೇಳಿ.

ಶ್ರೀ ಎಂ.ಟಿ.ಕೃಷ್ಣಪ್ಪ: ಎರಡು ನಿಮಿಷದಲ್ಲಿ ಪೂರ್ತಿ ಹೇಳಿಬಿಡುತ್ತೇನೆ. ಅಲ್ಲೇನಾಗಿದೆ ಎಂದರೆ ಇವತ್ತು ಒಂದು cubic metre ಗೆ ಸರ್ಕಾರ 600–00 ರೂಪಾಯಿಗಳನ್ನು fix ಮಾಡಿದೆ. ಆದರೆ ಇವರೆಲ್ಲಾ ಬೆಂಗಳೂರಿನಲ್ಲಿ ಒಂದು ಲಾರಿ ಲೋಡ್ ಮರಳಿಗೆ 25 ಸಾವಿರದಿಂದ 30 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಹೀಗಾಗಿ ಒಂದು ದಿವಸಕ್ಕೆ 150 ಲಾರಿಗಳಿಗೆ ಸರ್ಕಾರಿ ಹಣ ನಿಗದಿ ಮಾಡಿದರೂ ಸಹ ಕೊನೇ ಪಕ್ಷ 4 ಲಕ್ಷ ರೂಪಾಯಿಗಳು ಪ್ರತಿ ದಿವಸ ಹೋಗುತ್ತದೆ. ಒಟ್ಟಾರೆ ಒಂದು ದಿವಸಕ್ಕೆ 4 ಲಕ್ಷ ರೂಪಾಯಿಗಳಾದರೆ ಒಂದು ತಿಂಗಳಿಗೆ 12 ಕೋಟಿ ರೂಪಾಯಿಗಳು ಹೋಗುತ್ತವೆ. ಹೀಗಾಗಿ ಒಂದು ವರ್ಷದಲ್ಲಿ ಸುಮಾರು ಇಲ್ಲಿಯವರೆಗೆ 1,500–2,000 ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗಿದೆ. ಯಾರೂ ಒಂದು ರೂಪಾಯಿ ರಾಯಲ್ಟಿ ಕೊಡುವುದಿಲ್ಲ. ಎಲ್ಲಾ ಟ್ರ್ಯಾಕ್ಟರ್‌ನಲ್ಲಿ ಮರಳನ್ನು stock ಮಾಡಿ ರಾತ್ರೋರಾತ್ರಿ ಸಾಗಿಸುತ್ತಾರೆ. ಪೊಲೀಸಿನವರು ಯಾರು ಆಶ್ರಯ ಮನೆ ಕಟ್ಟಿಕೊಳ್ಳಲಿಕ್ಕೆ ಮರಳು ತುಂಬುತ್ತಾರೆ, ಅವರನ್ನು ಹೋಗಿ ಹಿಡಿಯುತ್ತಾರೆ. ಪೊಲೀಸ್‌ನವರು ಮತ್ತು ಕಂದಾಯ ಇಲಾಖೆಯವರು ಶಾಮೀಲಾಗಿ ನಡೆಸುತ್ತಿರುವ ದೊಡ್ಡ ದಂಧೆ. ಇದರ ಬಗ್ಗೆ ಏತಕ್ಕೆ ನಾನು ಹೇಳುತ್ತೇನೆಂದರೆ ಮಹದೇವಪ್ಪನವರು ಇಲ್ಲಿದ್ದಾರೆ. ಮೈನ್ಸ್‌ಗಾಗಿ ಇಲ್ಲಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡಿದ ಇತಿಹಾಸ ಈ ರಾಜ್ಯದಲ್ಲಿದೆ. ಇದು ಅದಕ್ಕಿಂತ ದೊಡ್ಡ ದಂಧೆಯಾಗಿದೆ ಮಹದೇವಪ್ಪನವರೆ, ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಯಾರೋ ಒಬ್ಬ ಬಡವ ಮನೆ ಕಟ್ಟಿಕೊಳ್ಳಲಿಕ್ಕೆ ಟ್ರಾಕ್ಟರ್‌ನಲ್ಲಿ ಮರಳು ಪಡೆಯಲಿ, ಪಾಪ ಮನೆ ಕಟ್ಟಿಕೊಳ್ಳಲೇಕು. ಈ ದಂಧೆ ಮಾಡುತ್ತಿರುವವರು ಏಳೆಂಟು ಜನರಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ನಷ್ಟ ಮಾಡಿದರೆ ಏನರ್ಥ ಇದೆ? ಪೊಲೀಸ್ ಹಾಗೂ ಕಂದಾಯ ಇಲಾಖೆಯವರು ಇದರಲ್ಲಿ ಶಾಮೀಲಾಗಿದ್ದಾರೆ. ನಾನು ಡಿ.ಸಿ. ಎಸ್.ಪಿ.ಯವರಿಗೆ ಪತ್ರ ಕೊಟ್ಟಿದ್ದೇನೆ. ಅದು ಯಾವುದೂ ಸಹ ಕಾರ್ಯಗತಕ್ಕೆ ಬಂದಿಲ್ಲ, ಇವತ್ತು ನಮಗೆ ಬಹಳ ನೋವಿದೆ. ನಮ್ಮ ಕಂದಾಯ ಮಂತ್ರಿಗಳಾದ ಶ್ರೀನಿವಾಸ್ ಪ್ರಸಾದ್‌ರವರು ಇಲ್ಲಿದ್ದಾರೆ. ಸ್ವಾಮಿ, ಏನಾಗಿದೆ, ನಾಲ್ಕೈದು ವರ್ಷಗಳಿಂದ ನಮ್ಮ ತಹಸೀಲ್ದಾರ್‌ರವರಿಗೆ ಒಂದು ಜೀಪ್ ಇಲ್ಲ. ಆರ್.ಎಂ.ಸಿ. ಅಥವಾ ಯಾವುದೋ ಇಲಾಖೆಯಿಂದ ವಾಹನ ಕೊಡುತ್ತಾರೆ. ಹೀಗಾದರೆ ಅವರು ಹೇಗೆ inspection ಮಾಡಲಿಕ್ಕೆ ಆಗುತ್ತದೆ? 2012 ರಲ್ಲಿ

ಒಂದು Enforcement Act ಆಗಿದೆ. ಅದಕ್ಕನುಗುಣವಾಗಿ ಜೆಸಿಬಿ, ಇಟಾಚಿ ಇವೆಲ್ಲವನ್ನೂ seize ಮಾಡಿ ಇದರ ಬಗ್ಗೆ Enforcement Act ಅಡಿ ಕ್ರಮ ತೆಗೆದುಕೊಳ್ಳಬೇಕು. ಎಲ್ಲವನ್ನು forfeit ಮಾಡಿ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ, ಅದನ್ನು ರಿಕವರಿ ಮಾಡಬೇಕು. ಸಾಧ್ಯವಾದರೆ ಲೋಕಾಯುಕ್ತಕ್ಕೆ ಈ ವಿಷಯವನ್ನು refer ಮಾಡಿ detailed enquiry ಮಾಡಿ ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಇದಕ್ಕೆ ತಾವೂ ಸೇರಿ ಇದಕ್ಕೆ ಸಹಕಾರ ನೀಡಬೇಕು. 2012 ರಲ್ಲಿ ಬಂದ Enforcement Act ಅನ್ನು ಕೂಡಲೇ ಜಾರಿ ಮಾಡಬೇಕು. ಟ್ರ್ಯಾಕ್ಟರ್, ಜೆಸಿಪಿ ಎಲ್ಲವನ್ನು ಕೂಡಲೇ seize ಮಾಡಲಿಕ್ಕೆ ಡಿ.ಸಿ., ಎಸ್.ಪಿ.ಯವರೆಗೆ ಆದೇಶ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಬಿ.ನಿಂಗಯ್ಯ (ಮೂಡಿಗೆರೆ) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ನನ್ನ ತಾಲ್ಲೂಕಿನಲ್ಲಿ ನಾಲ್ಕು ಜೀವನದಿಗಳು ಹರಿಯುತ್ತವೆ. ಈ ವಿಚಾರಕ್ಕೆ ಸಂಬಂಧಿಸಿದ ಹಾಗೆ ಇಡೀ ರಾಜ್ಯದಾದ್ಯಂತ ಅವ್ಯಾಹತವಾಗಿ ರಾತ್ರೋರಾತ್ರಿ ಮರಳು ದಂಧೆ ಆಗುತ್ತಿರುವ ಬಗ್ಗೆ ತಮಗೂ ಸಹ ಗೊತ್ತಿದೆ ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಎಲ್ಲರೂ ಸಹಿ ಹಾಕಿರುವಂಥ ಉದ್ದೇಶ. ಇದು ಇಡೀ ರಾಜ್ಯದ ದೊಡ್ಡ ಸಮಸ್ಯೆ. ಗಣಿ ಸಂಪತ್ತು ಲೂಟಿ ಆದ ಹಾಗೆ ಮರಳು ಸಂಪತ್ತು ಲೂಟಿಯಾಗುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳು ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಸಾಮಾನ್ಯ ರೈತರು, ಕಾರ್ಮಿಕರು, ಬಡವರು ಮನೆ ಕಟ್ಟಿಕೊಳ್ಳಲಿಕ್ಕೆ ಮರಳು ಸಿಗುತ್ತಿಲ್ಲ. ಇವತ್ತು ಎಲ್ಲಾ ಅಧಿಕಾರಿಗಳು ಸೇರಿ ಈ ಕಳ್ಳ ದಂಧೆಯಲ್ಲಿ ಪಾಲುದಾರರಾಗಿದ್ದಾರೆ. ಆ ದೃಷ್ಟಿಯಿಂದ ಮರಳು ನೀತಿಯನ್ನು ಸುಮಾರು ಹದಿನೈದು ದಿವಸಗಳ ಹಿಂದೆ ಒಂದ ಮರಳು ನೀತಿಯನ್ನು ತತ್‌ಕ್ಷಣ ಮೀಟಿಂಗ್ ಕರೆದು ಮಾಡುತ್ತೇವೆಂದು ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದರು. ಆದರೆ 15 ದಿವಸಗಳಾದರೂ ಇವತ್ತಿನವರೆಗೆ ತಾವು ಸಭೆಯನ್ನು ಕರೆಯಲಿಲ್ಲ. ಇವತ್ತು ನಮ್ಮ ಭಾಗದಲ್ಲಿ ದಿನಕ್ಕೆ 100 ಕ್ಕೂ ಹೆಚ್ಚು ಲಾರಿಗಳು, 500 ಟ್ರ್ಯಾಕ್ಟರ್‌ಗಳು ರಾತ್ರೋರಾತ್ರಿ 9.00 ಗಂಟೆ ಮೇಲೆ ಪೋಲೀಸಿನವರು ಹಾಗೂ ಉಳಿದವರ ಸಹಾಕಾರದೊಂದಿಗೆ ಇವತ್ತು ಮರಳು ಅವ್ಯಾಹತವಾಗಿ ಬೆಂಗಳೂರಿಗೆ ಸಾಗಾಣಿಕೆಯಾಗುತ್ತಿದೆ. ಇಲ್ಲಿ 2,000–00 ರೂಪಾಯಿಗಳು ಒಂದು ಲಾರಿಗೆ ಸಿಗುತ್ತಿದೆ. ಅಲ್ಲಿ ನಾಲ್ಕು ಸಾವಿರ ರೂಪಾಯಿಗಳೂ ಕೂಡ

ಕಟ್ಟುತ್ತಿಲ್ಲ. ಅಲ್ಲಿ ಬಡವನಿಗೆ, ರೈತರಿಗೆ ಮನೆ ಕಟ್ಟಲಿಕ್ಕೆ ಮರಳು ಸಿಗುತ್ತಿಲ್ಲ. ಸಮುದ್ರದ ನೆಂಟಸ್ತಿಕೆ ಇದ್ದರೂ ಉಪ್ಪಿಗೆ ಬಡತನ ಎಂದು ಹೇಳುವ ರೀತಿಯಲ್ಲಿ ಅಲ್ಲಿ ನದಿ ಪಾತ್ರದಲ್ಲಿ ಜೀವನ ಮಾಡುತ್ತಿರುವವರಿಗೆ, ರೈತರಿಗೆ ಮರಳು ಸಿಗುತ್ತಿಲ್ಲ. ದಿನ ಬೆಳಗಾದರೆ ನಮಗೆ ಅಲ್ಲಿ ಕುಳಿತು ಕೆಲಸ ಮಾಡತಕ್ಕಂಥ ಸ್ಥಿತಿ ಇಲ್ಲ, ಮಾನ್ಯ ಅಧ್ಯಕ್ಷರೆ, ಆದುದರಿಂದ ಮಾನ್ಯ ಸಚಿವರು, ಕಂದಾಯ ಸಚಿವರು ಎಲ್ಲರೂ ಕೂಡಿ ಹೆಚ್ಚು ಗಮನ ಹರಿಸಿ ತತ್‌ಕ್ಷಣ ಇದಕ್ಕೆ ಒಂದು ಸಭೆಯನ್ನು ಕರೆದು ತಕ್ಷಣ ಒಂದು ಮರಳು ನೀತಿಯನ್ನು ರೂಪಿಸಿ ಎಲ್ಲರಿಗೂ ಮರಳು ಸಿಗುವಂತಾಗಬೇಕು, ದೇಶಕ್ಕೆ ನಷ್ಟವಾಗುವುದನ್ನು ತಪ್ಪಿಸಬೇಕು ಎಂದು ನಾನು ತಮ್ಮಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಬಾಲಕೃಷ್ಣ, ಇಲ್ಲ, ತಮ್ಮಣ್ಣರವರನ್ನು ಕರೆದಿದ್ದೇನೆ, ಶಿವಶಂಕರ್ ಆಗಲೇ ಕರೆದೆನಲ್ಲಾ? ತಾವಿರಲಿಲ್ಲ. ಸ್ವಲ್ಪ ತಾಳಿ, ಡಿ.ಸಿ.ತಮ್ಮಣ್ಣ ಇಲ್ಲ, ಮಾನಪ್ಪ, ಶಿವಲಿಂಗೇಗೌಡರು ಇಲ್ಲವೇ, ಸುರೇಶ್‌ಬಾಬು, ರೇವಣ್ಣ ಮಾತನಾಡಿ. ಕ್ರಮ ಸಂಖ್ಯೆ 5 ಮತ್ತು 7 ಅವೆರಡೂ ಒಂದೇ ವಿಷಯ ಅದಕ್ಕೆ mix ಮಾಡುತ್ತಿದ್ದೇನೆ. ಇದರಲ್ಲಿ ರಾಜ್ಯ ಎಂದು ಬಂದುಬಿಟ್ಟಿದೆ. ಇವರು ತಮ್ಮಣ್ಣನವರು ಇತರರು ಕುಣಿಗಲ್ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ಉಪ ವಿಭಾಗದಿಂದ ಮರಳು ವಿಲೇವಾರಿಯಲ್ಲಿ ಅಕ್ರಮ ನಡೆದಿರುವ ವಿಚಾರದಲ್ಲಿ ಎಂದು ಕೊಟ್ಟಿದ್ದಾರೆ. ಎಲ್ಲಾ ಒಂದೇ ವಿಷಯಕ್ಕೆ ಸಂಬಂಧಪಟ್ಟಿದೆ, ಮಾತನಾಡಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಸಭಾಧ್ಯಕ್ಷರೆ, ಮರಳು ದಂಧೆ ನಡೆಯುತ್ತಿದೆ. ನಾವು ನದಿಯನ್ನು ನೋಡಿಲ್ಲ. ನಮ್ಮಲ್ಲಿ ಮರಳು ಇಲ್ಲವೆಂದು ನಾನು ಸಹಿ ಹಾಕಿರುವುದು. ಮರಳಿನ ದಂಧೆ ಹೇಗಾಗುತ್ತಿದೆ ಎಂದರೆ ಲೋಕೋಪಯೋಗಿ ಇಲಾಖೆಯ ಕಾನೂನು ತರುವುದಕ್ಕಿಂತ ಮೊದಲಿಗೆ ಹೇಗೋ 4,000/– 5,000/–, 6,000/– ರೂಪಾಯಿಗಳಿಗೆ ಒಂದೊಂದು ಲೋಡ್ ಮರಳು ಸಿಗುತ್ತಿತ್ತು. ಈಗ ಇವರು scarcity ತಂದಿಟ್ಟು ಮರಳು ಸಿಗುವುದಿಲ್ಲ ಎಂದು ಹೇಳಿ 16,000–00 ರೂಪಾಯಿಗಳಾಗಿವೆ. ಒಂದು ಲೋಡ್ ಮರಳು 25,000–00 ರೂಪಾಯಿಗಳವರೆಗೆ ಹೆಚ್ಚಾಗಿದೆ. ದಯವಿಟ್ಟು ನೀವು ಸರಿಯಾಗಿ ಕಾನೂನುಬದ್ಧವಾಗಿ ಮರಳನ್ನು ನಾಗರಿಕರಿಗೆ ದೊರೆಯುವ ಹಾಗೆ ಮಾಡಿ, ಲೋಕೋಪಯೋಗಿ ಇಲಾಖೆಯಿಂದ ಸಭೆಗೆ ನಮ್ಮನ್ನೆಲ್ಲಾ ಕರೆದು

ನಿಮ್ಮಲ್ಲೇ ಒಂದು ಯಾರ್ಡ್ ಮಾಡುತ್ತೇವೆ ಅಲ್ಲಿ ತಂದು ಮರಳನ್ನು ಹಾಕಿ ಅರಸೀಕೆರೆಯ ಎಲ್ಲಾ ನಾಗರಿಕರಿಗೂ ಮರಳನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇವತ್ತಿನವರೆಗೆ ಒಂದೇ ಒಂದು ಯಾರ್ಡ್ ಅನ್ನು ಮಾಡಲಿಲ್ಲ, ಮರಳನ್ನು ಕೊಡಲಿಲ್ಲ. ಇವತ್ತು 25,000-00 ರೂಪಾಯಿಗಳಿಗೆ ಬ್ಲಾಕ್‌ನಲ್ಲಿ ತೆಗೆದುಕೊಳ್ಳಲು 12.00 ಗಂಟೆ ರಾತ್ರಿಯಲ್ಲಿ ಎದ್ದು ಎಷ್ಟು ಗಂಟೆಗೆ ಮರಳು ಬರುತ್ತದೆ ಎಂದು ಕಾಯ್ದುಕೊಂಡು ಕುಳಿತುಕೊಳ್ಳುತ್ತಾರೆ. ಕದ್ದು ಹೊಡೆದುಕೊಂಡು ತರುವ ಮರಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಜನ ನನಗೇ ನನಗೆ ಎಂದು ಕಾಯ್ದುಕೊಂಡು ನಿಂತಿರುತ್ತಾರೆ. ಏಕೆಂದರೆ ಆ ರೀತಿ scarcity ಉಂಟು ಮಾಡಿದ್ದಾರೆ. ಮೊದಲು ಈ ರೀತಿ ಇತಲಿಲ್ಲ. ಏಕೆಂದರೆ 50-100 ನಿಂತುಕೊಳ್ಳುತ್ತಿತ್ತು. ಇವರು ಚೌಕಾಸಿ ಮಾಡಿ 4,000, 5,000, 6,000 ರೂಪಾಯಿಗಳನ್ನು ಅವರ ಶಕ್ತಿಗನುಸಾರವಾಗಿ ಕೊಟ್ಟು ಮರಳನ್ನು ತೆಗೆದುಕೊಳ್ಳುತ್ತಿದ್ದರು. ಈಗ ನೀವು ಕಾನೂನನ್ನು ತಂದಿರುವುದರಿಂದ ಪೊಲೀಸಿನವರಿಗೆ ಮತ್ತು ರೆವಿನ್ಯೂ ಅಧಿಕಾರಿಗಳಿಗೆ ಹೆದರಿಕೊಂಡು rate ಜಾಸ್ತಿ ಮಾಡಿದ್ದಾರೆ. ಇದರಲ್ಲಿ Geological ಇಲಾಖೆಯವರು ಬೇರೆ. ಈ ಮೂರಕ್ಕೂ ಮಾಮೂಲಿ ಕೊಡಬೇಕು. ನೀವು ಮಾಡಿರುವ ಕಾನೂನು ಹೇಗಿದೆಯೆಂದರೆ ಭ್ರಷ್ಟಾಚಾರ ಹೆಚ್ಚುವುದಕ್ಕೆ ಕಾರಣ ಮಾಡಿದ್ದೀರಿ. ಅಲ್ಲಿ ಸರ್ಕಾರಕ್ಕೆ ಸಿಗುವುದು ಒಂದು ಕ್ಯೂಬಿಕ್ ಮೀಟರ್‌ಗೆ ಕಡಿಮೆ. ಒಂದು ಕ್ಯೂಬಿಕ್ ಮೀಟರ್‌ಗೆ 600 ರೂಪಾಯಿಗಳು ಅಷ್ಟೇ ಸಿಗುವುದು. ಆದರೆ ನಮ್ಮ ಜನ ಅಲ್ಲಿಗೆ ಹೋಗಿ ತರುವುದಕ್ಕಾಗುವುದಿಲ್ಲ. ಮರಳಿನ ಲಾರಿಗಳನ್ನೇ ಆಶ್ರಯಿಸಿಕೊಳ್ಳಬೇಕು. ನಮ್ಮ DC ಗಳು ಲಾರಿ ಇಷ್ಟು ಅಡಿ ಉದ್ದವಿರಬೇಕೆಂದು order ಮಾಡಿದ್ದಾರೆ. ಬೇರೆ ಲಾರಿಗಳನ್ನು ನಾವು ತೆಗೆದುಕೊಂಡು ಹೋಗುವ ಹಾಗಿಲ್ಲ.

ಅಧ್ಯಕ್ಷರು : Details ಬೇಡ. ಏನು ವ್ಯವಸ್ಥೆಯಾಗಬೇಕೆಂಬುದನ್ನು ಹೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇಲ್ಲಿರುವ ಪಾಯಿಂಟ್ ಏನೆಂದರೆ, ಮರಳಿನ ದಂಧೆ ಯಾವ ರೀತಿ ಆಗಿದೆ, ಇದರಿಂದ ರೈತರು ಮತ್ತು ಸಾರ್ವಜನಿಕರು ಯಾವ ರೀತಿ ತೊಂದರೆ ಅನುಭವಿಸುತ್ತಿದ್ದಾರೆಂಬ ಕಷ್ಟವನ್ನು ಹೇಳುತ್ತಿದ್ದೇನೆ. ಇದರಿಂದಾಗಿ ಇವತ್ತು ಅವರು 3-4 ಟೋಲ್‌ಗಳಿಗೆ ಹಣವನ್ನು

ಕೊಡಬೇಕು. ಉದಾಹರಣೆಗೆ, ನಮ್ಮ ಬೇಲೂರಿನಿಂದ ಮರಳನ್ನು ತುಂಬಿಕೊಂಡು ಹೊರಟರೆ ನಾಲ್ಕು ಪೋಲಿಸಿನವರಿಗೆ ಮಾಮೂಲಿ ಕೊಡಬೇಕು.

Geologist ಗೆ ಮತ್ತು PWD ಯವರಿಗೂ ಕೂಡ ಕೊಡಬೇಕು. ಇದೇನಯ್ಯ ಮರಳಿಗೆ ಇಷ್ಟೊಂದು ಜಾಸ್ತಿ ಮಾಡಿದ್ದೀರೆಂದು ಕೇಳಿದರೆ, ಅವನು 'ಏನು ಮಾಡೋಣ? ದಾರಿ ಮಧ್ಯದಲ್ಲೇ 10,000 ರೂಪಾಯಿಗಳು ಹೋಗುತ್ತದೆ' ಎಂದು ಹೇಳುತ್ತಾರೆ. ಈ ದಾರಿ ಮಧ್ಯದಲ್ಲಿ ಹೋಗುವ 10,000 ರೂಪಾಯಿಗಳನ್ನು ನಿಲ್ಲಿಸಿ. ಅದಾದರೂ ರೈತರಿಗೆ, ಸಾರ್ವಜನಿಕರಿಗೆ ಸಿಗಲಿ. ಇಲ್ಲವಾದರೆ free ಬಿಟ್ಟುಬಿಡಿ. ಆಗ ಮರಳು 6,000 ರೂಪಾಯಿಗಳಿಗೆ ಇಳಿಯದಿದ್ದರೆ ಕೇಳಿ. ಯಾರಿಗೆ ಮರಳು ಬೇಕೋ ಅವನು ಹೋಗಿ ತುಂಬಿಕೊಂಡು ಬಂದು ಲಾರಿಯನ್ನು ನಿಲ್ಲಿಸಿಕೊಳ್ಳುತ್ತಾನೆ. ಬೆಂಗಳೂರಿನಲ್ಲಿ ನೋಡಿ ಇಷ್ಟ ಬಂದ ಮರಳನ್ನು ಹೇಗೆ ಬೇಕೋ ಹಾಗೆ ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಲಾರಿಯನ್ನು ತಂದು ನಿಲ್ಲಿಸಿಕೊಳ್ಳುವ ಹಾಗಿಲ್ಲ. ಪೊಲೀಸಿನವರು ಬರುತ್ತಾರೆ. Town ನಲ್ಲಿ ಅಡ್ಡ ಹಾಕುತ್ತಾರೆಂದು ಕದ್ದು ಅಲ್ಲಿಂದ ಮೂರು ಕಿ.ಮೀ. ಮುಂದೆ ಹೋಗಿ unload ಮಾಡಿ ಅಲ್ಲಿಂದ ಟ್ರ್ಯಾಕ್ಟರ್‌ನಲ್ಲಿ ತೆಗೆದುಕೊಂಡು ಬರಬೇಕು. ನಾವೆಲ್ಲಾ ಜನಗಳಿಂದ ಬಯ್ಯಿಸಿಕೊಳ್ಳುತ್ತಿದ್ದೇವೆ. ದಯವಿಟ್ಟು ಮಾನ್ಯ ಮಂತ್ರಿಗಳನ್ನು ಕರೆದು ಒಳ್ಳೆಯ ಕೆಲಸವನ್ನು ಮಾಡಿಯೆಂದು ಹೇಳಿ.

ಅಧ್ಯಕ್ಷರು : ಆಯಿತು. ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಮಹದೇವಪ್ಪನವರು ಸದನದಲ್ಲಿದ್ದಾರೆ. 20,000 ಲೋಡ್ ಮರಳು ಬೇಲೂರಿನಲ್ಲಿ stock ಇದೆ, ಅಲ್ಲಿ road ಆಗಬೇಕು ಅಷ್ಟೆ. ಸುಮಾರು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸರ್ಕಾರಕ್ಕೆ 15 ಕೋಟಿ ರೂಪಾಯಿಗಲಷ್ಟು ಹಣ ಬರುತ್ತದೆ. ಈಗಾಗಲೇ ಜಿಲ್ಲಾಧಿಕಾರಿಗಳು ಸುಮಾರು 15 ಕೋಟಿ ರೂಪಾಯಿಗಳ ಮರಳನ್ನು ಹಿಡಿದಿದ್ದಾರೆ. ಇದಕ್ಕೆ ನಾನು ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಇವತ್ತು ಕೆಲವು ಕಡೆ ರಾತ್ರಿ ಮೂರು ಗಂಟೆ ಮೇಲೆ ಹೊರಟರೆ. . . .

ಅಧ್ಯಕ್ಷರು : ಏನಾಗಬೇಕೆಂದು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಏನಿಲ್ಲ.road ಗೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಬಿಗಿ ಮಾಡಿದರೆ, ಶಿವಲಿಂಗೇಗೌಡರು ಹೇಳಿರುವ ಪ್ರಕಾರ ಒಂದು ಲೋಡ್ ಮರಳಿನ ಬೆಲೆ 20,000 ರೂಪಾಯಿಗಳಿದೆ. ಅಲ್ಲಿ ಸುಮಾರು 10,000–12,000 ಲೋಡ್ ಮರಳು ಬರುತ್ತದೆ. ರಸ್ತೆಗಾಗಿ ಕೂಡಲೇ ಎರಡು ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಿ, ನಿಮ್ಮ ಇಂಜಿನೀಯರ್‌ಗಳನ್ನು ಕರೆಸಿ, ನಮ್ಮನ್ನು ಮತ್ತು ಶಿವಲಿಂಗೇಗೌಡರನ್ನು ಕರೆದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಒಂದು ಸಭೆಯನ್ನು ಮಾಡಿ. ಏಕೆಂದರೆ ಜನಸಾಮಾನ್ಯರಿಗೆ ಇವತ್ತು ಮರಳನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ರಾತ್ರೋತಾತ್ರಿ ಮರಳು ಬೆಂಗಳೂರಿಗೆ ಬರುತ್ತಿದ್ದು, ಇಲ್ಲಿ 30,000 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಅಲ್ಲೂ ಕೂಡ 25,000 ರೂಪಾಯಿಗಳಿದೆ. ಆದ್ದರಿಂದ ಕೂಡಲೇ ಈ ಸಂಬಂಧ ಕ್ರಮ ತೆಗೆದುಕೊಂಡು ಜಿಲ್ಲಾ ಕೇಂದ್ರ ಇರಬಹುದು, ಅರಸೀಕೆರೆ ಇರಬಹುದು ಅಲ್ಲಿ ಕಡಿಮೆ ಬೆಲೆಯಲ್ಲಿ ಮರಳು ಸಿಗುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಗೋವಿಂದ ಎಂ. ಕಾರಜೋಳರವರೆ, ಎಲ್ಲಾ ಸಂದರ್ಭಗಳಲ್ಲೂ ಮಾತನಾಡುವ ಹಾಗಿಲ್ಲ.

ಶ್ರೀ ಗೋವಿಂದ ಎಂ ಕಾರಜೋಳ : ಎಲ್ಲಾ ಸಂದರ್ಭಗಳಲ್ಲೂ ಅಲ್ಲ. ಇದು ಬಹಳ ಮಹತ್ವದ ವಿಷಯವಾಗಿದೆ, ದಯವಿಟ್ಟು ಇದಕ್ಕೆ ಅನುವು ಮಾಡಿಕೊಡಿ. ಕೇವಲ ಎರಡು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು : ಗೋವಿಂದ ಎಂ ಕಾರಜೋಳರವರೆ, ನಿಮಗೆ ಅನೇಕ ಬಾರಿ ಅವಕಾಶವನ್ನು ಕೊಟ್ಟಿದ್ದೇನೆ. Please take your seat

ಶ್ರೀ ಹೆಚ್.ಎಸ್. ಶಿವಶಂಕರ್ (ಹರಿಹರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಸದಸ್ಯರುಗಳು ಮಾತನಾಡಿದ್ದು, ಅಕ್ರಮ ಗಣಿಗಾರಿಕೆ ವಿಚಾರದ ಬಗ್ಗೆ ತಿಳಿಸಿದ್ದಾರೆ. ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ತುಂಗಭದ್ರಾ ನದಿ ಪಾತ್ರದಲ್ಲಿ ಬರುತ್ತದೆ. ಹೊನ್ನಾಳಿ, ಹರಿಹರ, ಹರಪನಹಳ್ಳಿ ಈ ಭಾಗಗಳಲ್ಲಿ ಅವ್ಯಾಹತವಾಗಿ ಮರಳು ಗಣಿಗಾರಿಕೆ ನಡೆಯುತ್ತಿದೆ.

ಕಾರಣವೇನೆಂದರೆ, ಈ ಹಿಂದೆ ನಮ್ಮ ಹರಿಹರದಲ್ಲಿ ಕಿರ್ಲೋಸ್ಕರ್ ಕಂಪನಿಯಿದ್ದಾಗ ML lease,ಅಂದರೆ moulding sand lease ಕೊಡುತ್ತಿದ್ದರು. ಆ ಸಂದರ್ಭಗಳಲ್ಲಿ 21 ಲೀಸ್‌ಗಳನ್ನು ಕೊಟ್ಟಿದ್ದರು. ಈ ಕಿರ್ಲೋಸ್ಕರ್ ಕಂಪನಿ ಮುಚ್ಚಿ ಹೋಗಿ ಸುಮಾರು 10–15 ವರ್ಷಗಳಾಗುತ್ತಾ ಬಂದಿದೆ. ಆದರೂ ಆ ಹೆಸರಿನಲ್ಲೇ ಇವತ್ತೂ ಕೂಡ moulding sand lease ಎಂದು ಹೇಳಿ ರಾತ್ರೋರಾತ್ರಿ ಅಕ್ರಮವಾಗಿ ಮರಳು ಸಾಗಾಣಿಕೆ ನಡೆಯುತ್ತಿದೆ. ಈ 21 ಲೀಸ್‌ಗಳಲ್ಲಿ ಈಗ ಒಂಭತ್ತು ಮಾತ್ರ ಉಳಿದಿದೆ. ಒಂಭತ್ತರಲ್ಲಿ ಮೂರು ರದ್ದಾಗಿದೆ. ಇನ್ನೂ ಆರು renewal ಗೋಸ್ಕರ ಅರ್ಜಿ ಹಾಕಿರುವಂತಹವರು ಇವತ್ತಿನವರೆಗೆ Environmental Protection Fee ಕಟ್ಟಿಲ್ಲ.Central Government ನಿಂದ Ministry of Environment and Forest clearance ಅನ್ನು ತೆಗೆದುಕೊಂಡಿಲ್ಲ. ಹಾಗೇ dead rent lease ಕಟ್ಟಿಲ್ಲ. ಇವತ್ತು ಅರ್ಜಿಗಳನ್ನು ಅಲ್ಲಿ renewal ಮಾಡಿಸಿಕೊಳ್ಳವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಹಿಂದೆ ಒಂದೊಂದು ಲೀಸ್‌ಗೆ 70 ರಿಂದ 120 ಎಕರೆ ಒಬ್ಬೊಬ್ಬರು allotment ಮಾಡಿಸಿಕೊಂಡಿರುವುದು. ಇತ್ತೀಚೆಗೆ ಆಧಾರದ ಮೇಲೆ ಹರಾಜು ಮಾಡಿ ಸರ್ಕಾರಕ್ಕೆ ಹಣವನ್ನು ತುಂಬಿ permit ಆಧಾರದ ಮೇಲೆ ಮರಳನ್ನು ಸಾಗಾಣಿಕೆ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದರು.

(ಈ ಹಂತದಲ್ಲಿ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ಮಾನ್ಯ ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಎಸ್. ಶಿವಶಂಕರ್ : ಇವತ್ತು ಒಂಭತ್ತು ಲೀಸ್‌ಗಳೇನಿವೆ, ಅದರಲ್ಲಿ ಆರು ಲೀಸ್ ಏನು renewal ಗೆ ಕೊಟ್ಟಿದ್ದಾರೋ ಅವುಗಳನ್ನೂ ಕೂಡ ರದ್ದುಗೊಳಿಸಿ. ಒಟ್ಟಾಗಿ ಬ್ಲಾಕ್ ಆಧಾರದ ಮೇಲೆ ಹರಾಜು ಮಾಡಿದರೆ ಸರ್ಕಾರಕ್ಕೆ ಬರುವಂತಹ ಹಣ ಜಾಸ್ತಿಯಾಗುತ್ತದೆ. ಇವತ್ತು ರಾತ್ರೋರಾತ್ರಿ ಮರಳನ್ನೇನು ಸಾಗಾಣಿಕೆ ಮಾಡುತ್ತಿದ್ದಾರೋ ಅದರಿಂದ ಪೊಲೀಸ್ ಇಲಾಖೆಗೆ, ರೆವಿನ್ಯೂ ಇಲಾಖೆಗೆ, ಇದು ಒಂದು ರೀತಿಯ ಹಬ್ಬವಾಗಿದೆ. ರಾತ್ರೋರಾತ್ರಿ ಬರುವಂತಹವರಿಂದ ಎಷ್ಟು ಬೇಕೋ ಅಷ್ಟು ಹಣವನ್ನು ತೆಗೆದುಕೊಂಡು ಲಾರಿ ಟ್ರ್ಯಾಕ್ಟರ್‌ಗಳನ್ನು ಬಿಡುವಂತಹ ವ್ಯವಸ್ಥೆಯಾಗುತ್ತಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಹಾಗಾಗಿ ಈ ಎಲ್ಲಾ ಲೀಸ್‌ಗಳನ್ನು ರದ್ದುಗೊಳಿಸಿ ಬ್ಲಾಕ್

ಆಧಾರದ ಮೇಲೆ ಬ್ಲಾಕ್ ಮಾಡಿ ಹರಾಜು ಮಾಡಿದರೆ ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ಸುಮಾರು 50 ಕೋಟಿ ರೂಪಾಯಿಗಳಷ್ಟು ಆದಾಯ ಬರುವುದಕ್ಕೆ ಸಾಧ್ಯವಾಗುತ್ತದೆ. ಇಂದು ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆಗೆ ಇತಿಶ್ರೀ ಹಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಗಮನ ಹರಿಸಿ ಇವೆಲ್ಲವನ್ನೂ ರದ್ದು ಮಾಡಿ. ಈಗಾಗಲೇ ರದ್ದು ಮಾಡುವುದಕ್ಕೆ Director ರವರು ಶಿಫಾರಸ್ಸನ್ನು ಕೂಡ ಮಾಡಿದ್ದಾರೆ. C& I Secretary ಯವರ ಬಳಿ file ಇದೆ. ಕೂಡಲೇ ಅದನ್ನು ತರಿಸಿಕೊಂಡು ಎಲ್ಲವನ್ನೂ ರದ್ದು ಮಾಡಿ. ಉಳ್ಳವರು, ಶಕ್ತಿಯಿರುವಂತವರು ಮಾತ್ರ ಇದ್ಯಾವುದನ್ನೂ ಕಟ್ಟದೆ, EPF ಕಟ್ಟಿಲ್ಲ. MoF clearance ತೆಗೆದುಕೊಂಡಿಲ್ಲ. ಇವೆಲ್ಲವನ್ನೂ ತೆಗೆದುಕೊಳ್ಳದಿದ್ದರೂ ಕೂಡ renewal ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಕೂಡಲೇ ಅವೆಲ್ಲವನ್ನು ರದ್ದು ಮಾಡಿ, ಬ್ಲಾಕ್ ಆಧಾರದ ಮೇಲೆ ಹರಾಜು ಮಾಡಿದರೆ ಖಂಡಿತವಾಗಿ ಸರ್ಕಾರಕ್ಕೆ ಹಣ ಬರುತ್ತದೆ. ಸಾಕಷ್ಟು ಆದಾಯ ಬರುತ್ತದೆ. ಜೊತೆಗೆ permit ಆಧಾರದ ಮೇಲೆ ಇವತ್ತು ಎಲ್ಲರಿಗೂ ಮರಳು ಸಿಗುವಂತಹ ವ್ಯವಸ್ಥೆಯಾಗುತ್ತದೆ. ಇಲ್ಲವಾದಲ್ಲಿ ಎಲ್ಲರೂ ಮಾತನಾಡಿದ ಹಾಗೆ 30,000 ರಿಂದ 40,000 ರೂಪಾಯಿಗಳು ಒಂದು ಲೋಡ್‌ಗೆ ಬೆಂಗಳೂರಿನಲ್ಲಿ ಸಿಗುತ್ತಿದೆ ಎಂದು ಏನು ಹೇಳಿದ್ದಾರೋ ಆ ಬೆಲೆ ಕೂಡ ಕಡಿಮೆಯಾಗುತ್ತದೆ. ದಿನನಿತ್ಯ ಮರುಐಣ ಕಟ್ಟಡ ಕಾಮಗಾರಿಗೆ ಅವಶ್ಯಕತೆಯಿದೆ. ಅದ್ದರಿಂದ ಕಡಿಮೆ ಬೆಲೆಯಲ್ಲಿ ಮರಳು ಸಿಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಅಕ್ರಮ ಮರಳು ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯವನ್ನು ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿನಿತ್ಯ ಪತ್ರಿಕೆಯಲ್ಲಿ ಬರುತ್ತಿದೆ. ಆ paper ಕೂಡ ಕೊಟ್ಟಿದ್ದೇನೆ. ನಾನು ನಿಜವಾಗಿ ಹೇಳುತ್ತೇನೆ. ನಮ್ಮ ಸಮ್ಮಿಶ್ರ ಸರ್ಕಾರವಿದ್ದಾಗ ನಾನು ಮತ್ತು ಕುಮರಸ್ವಾಮಿಯವರು ಒಮ್ಮೆ ದೆಹಲಿಗೆ ಹೋಗಿದ್ದೆವು. ಆಗ ಕೋಲಾರದಲ್ಲಿ ಒಂದು ದೊಡ್ಡ ದಂಧೆಯಿತ್ತು. ಏನೆಂದರೆ ಮಾರುಕಟ್ಟೆಯಲ್ಲಿ ಟೊಮ್ಯಾಟೋ ಬೆಲೆ ಬಿದ್ದು ಹೋಗಿದ್ದರಿಂದ ಬೀದಿಯಲ್ಲಿ strike ಮಾಡುತ್ತಿದ್ದರು. ಅಲ್ಲಿಂದಲೇ ಬೆಂಬಲ ಬೆಲೆಯನ್ನು

ಘೋಷಣೆ ಮಾಡಿದ ಇತಿಹಾಸ ಈ ರಾಜ್ಯದಲ್ಲಿದೆ. ಪ್ರತಿ ದಿವಸ ದಂಧೆಗಳ ಬಗ್ಗೆ ಪತ್ರಿಕೆಯಲ್ಲಿ ಬರುತ್ತಿದ್ದರೂ ನಮ್ಮ ಸರ್ಕಾರ ಕಣ್ಣೇ ಬಿಡುತ್ತಿಲ್ಲವಲ್ಲ, ಏಕೆ? ಆ ಪೇಪರ್ ನಿಮ್ಮ ಕಡೆ ಕೊಟ್ಟಿದ್ದೇನೆ, ದಯವಿಟ್ಟು ಓದಬೇಕು. ನಮ್ಮ ಅಧ್ಯಕ್ಷರು Zero Hour ತರಹ ಮಾತನಾಡುತ್ತಾರೆ. ನಿಮಗೆ ಮಾತನಾಡುವು–ದಕ್ಕಾಗುವುದಿಲ್ಲ. ಇದು ನಮ್ಮ ದೌರ್ಭಾಗ್ಯವಾಗಿದೆ. ಪೂರ್ತಿ ಅವಕಾಶ ಕೊಟ್ಟರೆ ಚರ್ಚೆ ಮಾಡಬಹುದು. ಒಂದೂವರೆ ಎರಡು ಸಾವಿರ ಕೋಟಿ ರೂಪಾಯಿಗಳು ನಷ್ಟವಾಗುತ್ತದೆಂದರೆ ಇದಕ್ಕೆ ಅರ್ಥವಿಲ್ಲವೇ? ಇದು ಯಾರ ಹಣ, ಸ್ವಾಮಿ? ರಾಜ್ಯದ ಪರಿಸರದ ಹಣ. ಯಾರೋ 4–5 ಜನ ಲೂಟಿ ಮಾಡಿ ಬೆಂಗಳೂರಿಗೆ supply ಮಾಡುವವರಿಗೆ... ಅನುಕೂಲವಾದಂತಾಯಿತು. ಆಯಿತು, ಆಯಿತು, ಕುಳಿತುಕೊಳ್ಳಿ ಎಂದರೆ ನಾವೇಕೆ ಇಲ್ಲಿ ಚರ್ಚೆ ಮಾಡಬೇಕು. ಇದರ ಔಚಿತ್ಯವಾದರೂ ಏನಿದೆ?

ಛೇರ್ಮನ್ : ಸರ್ಕಾರ ಏನು ಉತ್ತರ ಕೊಡುತ್ತದೆಂದು ನೋಡೋಣ.

ಶ್ರೀ ಎಂ.ಟಿ. ಕೃಷ್ಣಪ್ಪ : ಸರ್ಕಾರ ಕೊಟ್ಟಿರುವ ಉತ್ತರ relevant ಉತ್ತರವೇ ಅಲ್ಲ. ಸಂಬಂಧವಿಲ್ಲದಿರುವ ಉತ್ತರ. It is no way concerned. ಛೇರ್ಮನ್ : ಅವರ ಉತ್ತರವನ್ನು ಕೇಳೋಣ.

ಶ್ರೀ ಗೋವಿಂದ ಎಂ. ಕಾರಜೋಳ್ (ಮುಧೋಳ) : ಮಾನ್ಯ ಅಧ್ಯಕ್ಷರೆ, ಮರಳಿನ ವಿಚಾರವಾಗಿ ಬಹಳ ಮಹತ್ವದ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮರಳು ಮಾರಾಟವನ್ನು PWD ಇಲಾಖೆಗೆ ವಹಿಸಿದ ಮೇಲೆ ನಮ್ಮ ಇಂಜಿನೀಯರ್‌ಗಳು Sand ಮಾರಾಟ ಮಾಡುವಂತಹ salesmen ಗಳಾಗಿದ್ದಾರೆ. ರಸ್ತೆ, ಕಟ್ಟಡ ಮಾಡುವ ಬದಲು sand ಮಾರಾಟ ಮಾಡಿಕೊಂಡು ಓಡಾಡುತ್ತಿದ್ದಾರೆ. ದಯಮಾಡಿ ಇದನ್ನು Mines and Geology Department ಗೆ ವರ್ಗಾವಣೆ ಮಾಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಸದನದ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಇನ್ನೊಂದು ಮಾತನ್ನು ಹೇಳುವುದೇನೆಂದರೆ ಮರಳನ್ನು ತೆಗೆಯುವುದರಿಂದ ನದಿಗಳ ಪಾತ್ರವೇ (River Courses) ಬದಲಾವಣೆಯಾಗುತ್ತಿದ್ದು, ಇದರಿಂದ ನದಿಗಳು ತನ್ನ ಮೂಲ ಬಿಟ್ಟು ಬೇರೆ ಕಡೆ ಹರಿಯುತ್ತಿವೆ. ಇದಕ್ಕೆ ಡ್ಯಾಮೇಜ್ ಆಗಿರುವುದೇ ಕಾರಣ. ಅದಕ್ಕಾಗಿಯೇ ನಾನು

ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಇದನ್ನು ಬಿಗಿ ಮಾಡಬೇಕು ಮತ್ತು Mines and Geology ಗೆ ವಹಿಸಿ ಕೊಡಬೇಕು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಉತ್ತರ ಹೇಳಿ.

ಡಾ. ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿಯಮ 69ರಡಿ ಮಾನ್ಯ ಸದಸ್ಯರಾದ...

ಶ್ರೀ ಎಂ.ಟಿ. ಕೃಷ್ಣಪ್ಪ : ಪ್ರಶ್ನೆಗೂ ಉತ್ತರಕ್ಕೂ ಸಂಬಂಧವೇ ಇಲ್ಲ.

ಅಧ್ಯಕ್ಷರು : ಹೇಳಿದ್ದಾರೆ, ಉತ್ತರ ಹೇಳಿ. ಓದಾದರೂ ಓದಿ, ಇಲ್ಲವೆಂದರೆ ಹಾಗೇ ಹೇಳಿ.

ಡಾ. ಹೆಚ್.ಸಿ.ಮಹದೇವಪ್ಪ : ಮೊದಲು ಉತ್ತರವನ್ನು ಓದಬೇಕು, ಓದುವುದೇ ಬೇಡವೆಂದರೆ ಹಾಗೇ ಹೇಳುವುದೇ?

ಶ್ರೀ ಎಂ.ಟಿ. ಕೃಷ್ಣಪ್ಪ : ಹಾಗೇ ಹೇಳಿ. Argument. . . . .

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, Main sum and substance ಕಳ್ಳಸಾಗಾಣಿಕೆ, ಸರ್ಕಾರದ ಬೊಕ್ಕಸ ಲೂಟಿ ಆಗುತ್ತಿದೆ, ಹಾಳಾಗುತ್ತಿದೆ, ಇದನ್ನು ಕಟ್ರೋಲ್ ಹೇಗೆ ಮಾಡುತ್ತೀರೆಂದು ಹೇಳಿ.

ಡಾ. ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರುಗಳು ಮರಳು ಗಣಿಗಾರಿಕೆ ಬಗ್ಗೆ ನಿಯಮ 69 ರ ಕೆಳಗೆ ಮಾತನಾಡಿ ಅನೇಕ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಳೆದ ಒಂದು ತಿಂಗಳ ಹಿಂದೆ ನಾನೂ ಸಹ ಅದೇ ಭಾಗದಲ್ಲಿದ್ದು ಅವರು ಮಾತನಾಡುವುದಕ್ಕಿಂತ ಹೆಚ್ಚಿಗೆ ಮಾತನಾಡಿ, ಅವರಿಗಿಂತಲೂ ಹೆಚ್ಚಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆ, ಮಾನವ ಅಭಿವೃದ್ಧಿಗೆ ಗಣಿಗಾರಿಕೆ ಅಗತ್ಯವಿದೆ. ಆದರೆ ಅಭಿವೃದ್ಧಿಗೆ ಎಷ್ಟು ಬೇಕೋ ಅಷ್ಟಕ್ಕೆ ಮಾತ್ರ ಸೀಮಿತವಾಗಿರಬೇಕು. ಮರಳು ಗಣಿಗಾರಿಕೆ ಮಾನವ ಅಭಿವೃದ್ಧಿಗೆ ಅಗತ್ಯವಾಗಿ ಬೇಕಾಗಿರುವಂತಹ ಒಂದು system ಆದರೆ, ಕಳೆದ 7–8 ವರ್ಷಗಳಿಂದ Estate Business ಗಗನಕ್ಕೇರಿ ಬಿದ್ದುಹೋದ ಮೇಲೆ ಅನೇಕ ಪಟ್ಟಭದ್ರ ಹಿತ್ತಾಸಕ್ತಿಗಳು ನದಿ ಪಾತ್ರಗಳಲ್ಲಿ ರಾಜ್ಯದ ಉದ್ದಗಲಕ್ಕೂ ತಮಗಿರತಕ್ಕಂತಹ ಹಣ ಮತ್ತು

ತೋಳ್ಬಲವನ್ನು ಬಳಸಿ, ಹುದುಗಿರತಕ್ಕಂತಹ ಮರಳಿನ ನಿಕ್ಷೇಪಗಳನ್ನು ಬಗೆದು, ರಸ್ತೆ ನೈರ್ಮಲ್ಯ, ಕುಡಿಯುವ ನೀರು, ಜನರ ಆರೋಗ್ಯವನ್ನೆಲ್ಲಾ ಹಾಳು ಮಾಡಿ ಒಂದು ದೊಡ್ಡ ದಂಧೆಯಾಗಿ ಇದು ಪರಿವರ್ತನೆಯಾಗಿದೆ. ಇದರಿಂದ ನದಿಪಾತ್ರ ಬಯಲು ಪ್ರದೇಶ ಸಹ ಬದಲಾಗುತ್ತಿದೆ. ಈ ನದಿ ತನ್ನ ಚಲನೆಯ ಪಾತ್ರವನ್ನು ಕೂಡ ಬದಲಾಯಿಸುತ್ತಿದೆ. ಇದರಿಂದ ಪರಿಸರಕ್ಕೆ ಹಾನಿಯಾಗಿ ನೀರಿನ ಅಂತರ್ಜಲದ ಮಟ್ಟ ಸಹ ಕುಸಿದು, ಆರೋಗ್ಯ ಕೂಡ ಹಾಳಾಗಿ ಅಲ್ಲಿರತಕ್ಕಂತಹ ಎಲ್ಲಾ Infrastructures ಹಾಳಾಗುತ್ತಿದೆ. ಜೊತೆಗೆ ಇದೊಂದು ದಂಧೆಯಾಗಿ ಪರಿಣಮಿಸಿರುವುದರಿಂದ ಅಲ್ಲಿಯ ಜನರ slow ಆಗಿ ಮಾಫಿಯಾ ಆಗಿ ಪರಿವರ್ತನೆಯಾಗುತ್ತಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇದಕ್ಕೊಂದು ನೀತಿಯನ್ನು ತರಬೇಕೆಂದು ನಾವು ವಿರೋಧ ಪಕ್ಷದಲ್ಲಿದ್ದಾಗ ಹೇಳಿದ್ದೆವು. ಮಾನ್ಯ ಮುಖ್ಯಮಂತ್ರಿಗಳು, ಸದಸ್ಯರಾದ ರೇವಣ್ಣ ನವರು, ಅನೇಕ ಸದಸ್ಯರುಗಳು ಹಾಗೂ ನಾನೂ ಸಹ ಹೇಳಿದ್ದೆ. ಆಗ ಅಂದಿನ ಸರ್ಕಾರದ ಲೋಕೋಪಯೋಗಿ ಸಚಿವರು ನಮ್ಮೆಲ್ಲರನ್ನೂ ಕರೆದು ಮೂರನೇ ಮಹಡಿಯಲ್ಲಿ ಒಂದು ಸಭೆಯನ್ನು ಏರ್ಪಡಿಸಿದಾಗ, ನಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೆವು. ಈಗ ತಮಿಳುನಾಡು ಮಾದರಿಯಲ್ಲಿರುವಂತೆ ಲೋಕೋಪಯೋಗಿ ಇಲಾಖೆಗೆ ವಹಿಸಿ ನಿಯಂತ್ರಣ ಮಾಡುವ ಉದ್ದೇಶವನ್ನಿಟ್ಟುಕೊಂಡು, ಮರಳಿನ ಸಾಗಾಣಿಕೆ ನಿಯಂತ್ರಣ ಮಾಡುವುದನ್ನು PWD ಇಲಾಖೆಗೆ ಕೊಟ್ಟಿದ್ದಾರೆ. ಇದು ಕೇವಲ ಒಂದು ಇಲಾಖೆಯಿಂದ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗದ ಕೆಲಸ Inter-Departmental co-ordination ಮಾಡಬೇಕು. 2011ನೇ ಇಸವಿಯ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಆ ಸಮಿತಿಯಲ್ಲಿ ಎಸ್.ಪಿ., ಆರ್.ಟಿ.ಓ, ಆ district ಗೆ ಸಂಬಂಧಿಸಿದಂತೆ Mines and Geology ಇಲಾಖೆಯ Deputy Director ಇರುತ್ತಾರೆ. ಇವರೆಲ್ಲರೂ ಇದನ್ನು ನಿಯಂತ್ರನ ಮಾಡುವುದಕ್ಕೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುತ್ತಾರೆ. ಇಷ್ಟೆಲ್ಲಾ ಆದರೂ ಸಹ ರಾಜ್ಯಾದ್ಯಂತ ವ್ಯಾಪಕವಾಗಿ ಮರಳಿನ ದಂಧೆ ನಡೆಯುತ್ತಲೇ ಇದೆ. ಸಂಜೆ 6 ಗಂಟೆಯ ನಂತರ ಮರಳನ್ನು ತೆಗೆಯಲೂ ಬಾರದು, transportation ಕೂಡ ಮಾಡಬಾರದು ಹಾಗೂ 8 ಟನ್‌ಗಿಂತಲೂ ಹೆಚ್ಚಿಗೆ ಮರಳನ್ನು transport

ಮಾಡಬಾರದು, ಲಾರಿಯ ಬಾಡಿ ಇಷ್ಟೇ ಇರಬೇಕೆಂದು ಹೇಳಿದ್ದಾರೆ. ಮಷಿನ್‌ನಿಂದ ತೆಗೆಯಬಾರದೆಂದು ಹೇಳಿದ್ದಾರೆ. ಸಾಧ್ಯವಾದರೆ ಒಂದು ಅಥವಾ ಎರಡು ಮಷಿನ್ ಬಳಸಬೇಕೆಂದು ಹೈಕೋರ್ಟ್ ಸೂಚನೆ ಕೊಟ್ಟದೆ, ಆದರೆ ಇದನ್ನು ನಾನು ನೋಡಿರುವುದಿಲ್ಲ. ಇಷ್ಟೆಲ್ಲಾ ದಂಧೆಗಳು ನಡೆಯುತ್ತಿದ್ದರೂ ಸಹ ಯಾರು ಯಾರಿಗೂ ಭಯಪಡದೆ, ವ್ಯಾಪಕವಾಗಿ ಕಣ್ಣಿಗೆ ಕಾಣದಂತಹ ಶಕ್ತಿಗಳು ಈ ದಂಧೆಯನ್ನು ಮುಂದುವರೆಸಿಕೊಂಡು ಹೋಗುತ್ತಲೇ ಇವೆ. ಇದಕ್ಕೊಂದು ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ ಇದೆ. ಇಲ್ಲದಿದ್ದರೆ ಇದರಿಂದ ನಮ್ಮ ಪರಿಸರ ಹಾಳಾಗುತ್ತದೆ, ನದಿಪಾತ್ರದ ದಿಕ್ಕೇ ಬದಲಾವಣೆಯಾಗುತ್ತದೆ, ಆರೋಗ್ಯ ಮತ್ತು ರಸ್ತೆಗಳೆಲ್ಲಾ ಹಾಳಾಗಿ, ಪ್ರಾಣಿ ಹಾಗೂ ಪಕ್ಷಿಗಳೂ ಸಹ ಅಲ್ಲಿ ವಾಸ ಮಾಡದಂತಹ ಪರಿಸ್ಥಿತಿ ಉದ್ಭವವಾಗಬಹುದು. ಅದಕ್ಕಾಗಿಯೇ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಒಂದು ಹೊಸ ನೀತಿಯನ್ನು ಸ್ಥಾಪನೆ ಮಾಡಿ ಯಾವುದೇ ಕಾರಣಕ್ಕೂ ಮರಳು ದುಬಾರಿಯಾಗದ ಹಾಗೆ ಮತ್ತು ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗಿ ಲಭ್ಯವಾಗುವ ರೀತಿಯಲ್ಲಿ ಎಚ್ಚರಿಕೆ ವಹಿಸುವುದು ಒಂದು, ಹಾಗೂ ಯಾರ್ಯಾರು ಮರಳು ಗಣಿಗಾರಿಕೆಯಲ್ಲಿ manual ಕಾರ್ಮಿಕರಿದ್ದಾರೆ, ಅವರನ್ನೆಲ್ಲಾ ಬಳಸಿಕೊಳ್ಳುವಂತಹದ್ದು, ಮರಳು ಗಣಿಗಾರಿಕೆಯ ದಂಧೆಯಲ್ಲಿ ಯಾರ್ಯಾರು ತೊಡಗಿರುತ್ತಾರೋ ಅವರಿಗೆ ಕಾನೂನಿನ ಮೂಲಕ ಕಠಿಣವಾದ ಶಿಕ್ಷೆ ಕೊಡುವುದು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಭತ್ತವನ್ನು ಲೆವಿ ಮಾಡುತ್ತಿದ್ದರು, ಅಲ್ಲಿ ಡಿಮ್ಯಾಂಡ್ ಎಷ್ಟಿದೆ, ಪರ್ಮಿಟ್ ಕೊಡುವುದು ಹೀಗೆ ಅನೇಕ ನೀತಿಗಳನ್ನು ಜಾರಿಗೆ ತರಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಆದಷ್ಟು ಜಾಗ್ರತೆಯಾಗಿ ಮರಳಿನ ಹೊಸ ನೀತಿಯನ್ನು ತಂದು ದಂಧೆಗೆ ಕಡಿವಾಣ ಹಾಕಬೇಕು, ದಂಧೆಯಲ್ಲಿ ತೊಡಗಿದವರಿಗೆ ಕಾನೂನಿನ ಮುಖಾಂತರ ಕಠಿಣವಾದ ಶಿಕ್ಷೆಯನ್ನು ನೀಡುವುದಕ್ಕೆ ಬಿಗಿ ಕಾನೂನನ್ನು ಮಾಡಲು ಸರ್ಕಾರ ತೀವ್ರವಾಗಿ ಆಲೋಚನೆ ಮಾಡಿದೆ. ಆದಷ್ಟು ಬೇಗನೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿ ಮರಳು ನೀತಿಯ್ನು ಜಾರಿ ಮಾಡಿ, ಮರಳು ದಂಧೆಗೆ ಕಡಿವಾಣ ಹಾಕುತ್ತೇವೆ. ಅಲ್ಲಿಯತನಕ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲ್ಲೆಲ್ಲಿ ಸಾಧ್ಯವಿದೆಯೊ ಅಲ್ಲಲ್ಲಿ ದಂಧೆ ಆಗದ ರೀತಿಯಲ್ಲಿ. . .

ಅಧ್ಯಕ್ಷರು : ಹೊಸನಗರದಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದು, open ಆಗಿ ವಸೂಲು ಮಾಡುತ್ತಿದ್ದರು. ಲೈಸೆನ್ಸ್ ಕೊಡುವುದಕ್ಕೆ ಯಾರಿಗೆ ಅಧಿಕಾರ ಕೊಟ್ಟಿದ್ದೀರೋ ಮೊದಲು ಅವರಿಗೆ ಸರಿಯಾಗಿ warning ಮಾಡಿ, ಯಾರು ತಪ್ಪಿತಸ್ಥರಿರುತ್ತಾರೋ ಅವರಿಗೆ sack ಮಾಡಿ fear develop ಮಾಡಿ.

ಡಾ. ಹೆಚ್.ಸಿ.ಮಹದೇವಪ್ಪ : The monitoring Chairman is DC. ತಾವು ಹೇಳಿದ ಬಗ್ಗೆ ಹೇಳುವುದೇನೆಂದರೆ ತಹಶೀಲ್ದಾರ್, PWD, ಪೊಲೀಸ್, Mines and Geology ಅಧಿಕಾರಿಗಳು, ಒಳ್ಳೆಯವರು ಬಿಟ್ಟು ಉಳಿದೆಲ್ಲರೂ ಸೇರಿ ಒಂದಲ್ಲಾ ಒಂದು ರೀತಿಯಲ್ಲಿ ಇರುತ್ತಾರೆ, ಅಲ್ಲದೇ ಇವರೇ informant ಆಗಿ ಕೆಲಸ ಮಾಡುತ್ತಾರೆ,

ಅಧ್ಯಕ್ಷರು : Here is a Government.

ಡಾ. ಹೆಚ್.ಸಿ.ಮಹದೇವಪ್ಪ : Certainly the Government is going to take stringent action against illegal extraction and transportation of sand.

ಅಧ್ಯಕ್ಷರು : Fear ಇದೆ ಎನ್ನುವ Message ಹೋಗಬೇಕು.

ಶ್ರೀ ಆರ್. ಅಶೋಕ್ (ಪದ್ಮನಾಭನಗರ) : ತಾವು ಕಮಿಟಿ ನೇಮಕ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈ ಹಿಂದೆ ಸಮಿತಿ ನೇಮಕ ಮಾಡಿದ್ದು, ಏನೇನು ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ, ಪಕ್ಷದ ತಮಿಳು ನಾಡು ರಾಜ್ಯದಲ್ಲಿ ವರ್ಷಕ್ಕೆ 300 ಕೋಟಿ ರೂ.ಗಳ Tax collect ಆಗುತ್ತಿದೆ. ನಮ್ಮ ರಾಜ್ಯದಲ್ಲಿ ಏಕೆ ಆಗುತ್ತಿಲ್ಲ? ನಮ್ಮ ರಾಜ್ಯದಲ್ಲಿ ಎಲ್ಲಾ ಸೇರಿ ಕಳೆದ ಬಾರಿ 8 ಕೋಟಿ ರೂ. ಗಳಿತ್ತು, ಈಗ 50 ಕೋಟಿ ರೂ. ಗಳಾಗಿದೆ. ಟೆಂಡರ್ ಪ್ರೊಸೆಸ್ ಏನಿದೆ, ಅದನ್ನು ಸರಿಯಾದ ರೀತಿಯಲ್ಲಿ identification ಮಾಡುತ್ತಿಲ್ಲ. ಎಲ್ಲೆಲ್ಲಿ ಮರಳು ತೆಗೆಯಬೇಕೆನ್ನುವುದು ಸರಿಯಾಗಿ ಗುರುತಿಸುತ್ತಿಲ್ಲ. ಆದ್ದರಿಂದ ಅದನ್ನು ಸರಿಯಾಗಿ ಗುರುತಿಸಿ ಟೆಂಡರ್ ಮಾಡಿದರೆ ಸರ್ಕಾರಕ್ಕೆ ಹಣ ಬರುತ್ತದೆ.

ಅಧ್ಯಕ್ಷರು : ಒಟ್ಟಾರೆ ವ್ಯವಸ್ಥೆ ಸರಿಯಿಲ್ಲ.

ಡಾ. ಹೆಚ್.ಸಿ.ಮಹದೇವಪ್ಪ : ಮಾನ್ಯ ಸದಸ್ಯರಾದ ಅಶೋಕ್ ರವರು ಗೃಹ ಸಚಿವರಾಗಿ ಕೆಲಸ ಮಾಡಿರುವ ಅನುಭವವಿದೆ. ಇದು Tax collection ಮತ್ತು ಸರಿಯಾದ Tender ಗೆ ಸಂಬಂಧ ಪಟ್ಟಿರುವುದಲ್ಲ. illegal extraction and transportation of sand, collusion of the bureaucrats with illegal extraction and transportation ಇದಕ್ಕೆ ಒಂದು ಬಿಗಿಯಾದ ಕಾನೂನನ್ನು ತಂದು, ಅದನ್ನು ನಿಯಂತ್ರಣ ಮಾಡದಿದ್ದರೆ ಇದೊಂದು ದಂಧೆಯಾಗಿ ಪರಿವರ್ತನೆಯಾಗಿ, ಯುವಕರು ಮುಂದೆ ಮಾಫಿಯಾ ಆಗಿ ಪರಿವರ್ತನೆಯಾಗುತ್ತಾರೆ. ಅದಕ್ಕೆ ಕಡಿವಾಣ ಹಾಕೇ ಹಾಕುತ್ತೇವೆ.

ಅಧ್ಯಕ್ಷರು : ಸಾಕು, please,

(ಗೊಂದಲ)

ಡಾ. ಹೆಚ್.ಸಿ.ಮಹದೇವಪ್ಪ : ಸರ್ಕಾರಕ್ಕೆ ಬರುವ ಒಂದು ಭಾಗ Revenue ಬಂದೇ ಬರುತ್ತದೆ.

ಶ್ರೀ ಎಂ.ಟಿ. ಕೃಷ್ಣಪ್ಪ : Sir, clarification. . . .

(ಗೊಂದಲ)

ಅಧ್ಯಕ್ಷರು : It is very clear.

ಡಾ. ಹೆಚ್.ಸಿ.ಮಹದೇವಪ್ಪ : ಅಗತ್ಯ ಬಿದ್ದರೆ ಶೀಘ್ರವಾಗಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡುತ್ತೇವೆ. ಅಗತ್ಯ ಬಿದ್ದರೆ ಈ ಬಗ್ಗೆ ಹೆಚ್ಚು ಮಾಹಿತಿಯನ್ನು ಹೊಂದಿರುವ ಮತ್ತು ಅನುಭವವನ್ನು ಹೊಂದಿರುವ ಮಾನ್ಯ ಸದಸ್ಯರನ್ನೂ ಸಹ ಕರೆದು, we will take clear opinion and their suggestion also,

ಅಧ್ಯಕ್ಷರು : ಸಾಕು, 7.30 ಗಂಟೆ ಆಯಿತು. ಕುಮರಸ್ವಾಮಿ,. . . .

(ಗೊಂದಲ)

ಅಧ್ಯಕ್ಷರು : Please. over, over He has taken note ofit.

(ಗೊಂದಲ)

ಅಧ್ಯಕ್ಷರು : ಆಯಿತು, ಇಡೀ ರಾತ್ರಿಯೆಲ್ಲಾ ಚರ್ಚೆ ಮಾಡಿ.

(ಗೊಂದಲ)

ಅಧ್ಯಕ್ಷರು : ಯಾವುದಕ್ಕೂ ಒಂದು ಮಿತಿ ಇರಬೇಕು. ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಇಲ್ಲಿಯವರೆಗೆ ಲೂಟಿ ಆಗಿರುವ ಬಗ್ಗೆ ಲಿಸ್ಟ್ ಅನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೇ ಆಲೂಗಡ್ಡೆ ಬಗ್ಗೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಚಿಕ್ಕನಾಯಕನಹಳ್ಳಿ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮರಳು ದಂಧೆ ಬಗ್ಗೆ ನಮ್ಮದು ಒಂದು ಮನವಿ ಇದೆ.

ಅಧ್ಯಕ್ಷರು : ಮರಳು ದಂಧೆ ಎಲ್ಲಾ ಒಂದೇ concept.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದೇ ಬೇರೆ, ನೀವೇ ನಮಗೆ subject ಕೊಟ್ಟಿದ್ದೀರಿ.

5. ರಾಜ್ಯದ ಚಿಕ್ಕನಾಯಕನಹಳ್ಳಿ–ತಿಪಟೂರು–ಗಂಡಸಿ–ದುದ್ದ ರಸ್ತೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ –ತಿಪಟೂರು–ದುದ್ದ–ಹಾಸನ Toll collection– ಆಧಾರದ ಮೇಲೆ ಅಭಿಜಿತ್ ಕಂಪನಿ ಅಂಥ ಒಂದು ಕಂಪನಿಯವರು ಆ ರೋಡ್‌ನ ಟೆಂಡರ್‌ನ್ನು ಗುತ್ತಿಗೆಗೆ ತೆಗೆದುಕೊಂಡರು. 30 ವರ್ಷಗಳ ಕಾಲ ಕರವನ್ನು ವಸೂಲಿ ಮಾಡಿಕೊಂಡು, ಹಣವನ್ನು ವಸೂಲಿ ಮಾಡಿಕೊಂಡು ಆ ರೋಡ್ ಅನ್ನು ನಾವು ಮಾಡಿ ಕೊಡುತ್ತೇವೆಂದು ಹೇಳಿ ಸರ್ಕಾರದ ಜೊತೆ MOU ಮಾಡಿಕೊಂಡು ಒಂದು ರಸ್ತೆಯನ್ನು ಅವರು ತೆಗೆದುಕೊಂಡರು. ಅವತ್ತು ಆ ರಸ್ತೆಯನ್ನು ತೆಗೆದುಕೊಳ್ಳಬೇಕಾರೆ ಸಾವಿರಾರು ಲಾರಿಗಳು ಮೈನಿಂಗ್ ಚಿಕ್ಕನಾಯನಹಳ್ಳಿ, ಹೊಸಪೇಟೆ ಭಾಗದಿಂದ ಕಳ್ಳದಂಧೆ ಮಾಡಿ ಲಾರಿಯಲ್ಲಿ Iron ore ತುಂಬಿಕೊಂಡು ಅಲ್ಲಿಂದ ಪಾಸ್ ಆಗುತ್ತಿದ್ದವು. ಇದೇ ರೀತಿ ನಡೆಯುತ್ತದೆಂದು ತಿಳಿದುಕೊಂಡು ಆ ಕಂಪನಿಯವರು ಬಂದು ತೆಗೆದುಕೊಂಡರು.Agreement